ನಿಯಮ 334ರ ಮೇರೆಗೆ

ಬಂಟ್ವಾಳ ತಾಲ್ಲೂಕು ಕೇಂದ್ರದ ಸರ್ಕಾರಿ ಆಸ್ಪತ್ರೆ ಬಹಳ ಹೀನಾವಸ್ಥೆಯಲ್ಲಿರುವುದು

ಶ್ರೀ ಬಿ. ರಮಾನಾಥ್ ರೈ(ಬಂಟ್ವಾಳ).—ಮಾನ್ಯ ಅಧ್ಯಕ್ಷರೇ, ಬಂಟ್ವಾಳ ವಿಧಾನ ಸಭಾ ಕ್ಷೇತ್ರದ, ಬಂಟ್ವಾಳ ತಾಲ್ಲೂಕು ಕೇಂದ್ರದ ಸರ್ಕಾರಿ ಆಸ್ಪತ್ರೆ ಬಹಳ ಹೀನಾವಸ್ಥೆಯಿಂದ ಕೂಡಿದೆ. ಇದನ್ನು ತಾಲ್ಲೂಕು ಕೇಂದ್ರದ ಇಪ್ಪತ್ತನ್ನು ಹಾಸಿಗೆಯ ಆಸ್ಪತ್ರೆಯಾಗಿಯೇ ಉಳಿದಿದೆ. ಅಲ್ಲದೆ ಕಳೆದ ವರ್ಷ ಈ ಆಸ್ಪತ್ರೆಗೆ ಎಕ್ಸ್‌ರೇ ಯೂನಿಟ್ ಒಂದು ಮಂಜೂರಾತಿಯಾಗಿದ್ದು, ಅದನ್ನು ಅಳವಡಿಸುವುದಕ್ಕೆ ಈ ಆಸ್ಪತ್ರೆಯಲ್ಲಿ ಸ್ಥಳವಿಲ್ಲದೆ ವಾಪಸಾತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಈ ಹಿಂದಿನ ಆರೋಗ್ಯ ಸಚಿವರು ಒಬ್ಬರು ಈ ಆಸ್ಪತ್ರೆಗೆ ಭೇಟಿ ಕೊಟ್ಟು, ಈ ಆಸ್ಪತ್ರೆಯನ್ನು ಅಭಿವೃದ್ಧಿಗೊಳಿಸುವ ಭರವಸೆ ಕೊಟ್ಟಿದ್ದಾರೆ. ಮಾತ್ರವಲ್ಲದೆ ೧೦೦ ಹಾಸಿಗೆಗಳ ಆಸ್ಪತ್ರೆಯಾಗಿ ಪರಿವರ್ತಿಸುವ ಭರವಸೆಯನ್ನೂ ಕೊಟ್ಟಿರುತ್ತಾರೆ. ಆದುದರಿಂದ ದಯಮಾಡಿ, ಈ ಸರ್ಕಾರವು ಸೂಕ್ತ ವ್ಯವಸ್ಥೆಯನ್ನು ಈ ಮೇಲಿನ ವಿಷಯಗಳಲ್ಲಿ ಕೈಗೊಳ್ಳುವಂತೆ ಈ ಮೂಲಕ ವಿನಂತಿಸುತ್ತೇನೆ.

ಶ್ರೀ ಎಂ. ರಘುಪತಿ(ಮಾನ್ಯ ಆರೋಗ್ಯ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ನಾನು ಆರೋಗ್ಯ ಸಚಿವರ ಪರವಾಗಿ, ಈ ಲಿಖಿತ ಹೇಳಿಕೆಯನ್ನು ಕೊಡುತ್ತಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳದ ಆಸ್ಪತ್ರೆಯು ತಾಲ್ಲೂಕು ಮಟ್ಟದ ಆಸ್ಪತ್ರೆಯಾಗಿದ್ದು, ಅಲ್ಲಿ ಪ್ರಸ್ತುತ ೨೪ ಹಾಸಿಗೆಗಳಿವೆ. ಸರ್ಕಾರದ ನೀತಿಯಂತೆ ಈ ತಾಲ್ಲೂಕು ಆಸ್ಪತ್ರೆಯನ್ನು ೩೦ ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಬೇಕಾಗಿದೆ. ರಾಜ್ಯದಲ್ಲಿ ಈ ರೀತಿ ಮೇಲ್ದರ್ಜೆಗೇರಿಸಬೇಕಾದ ಇನ್ನೂ ೪೬ ಆಸ್ಪತ್ರೆಗಳಿದ್ದು, ಸಾಕಷ್ಟು ಹಣ ದೊರೆತಾಗ ಹಂತಹಂತವಾಗಿ ಆದ್ಯತೆಯ ಮೇರೆಗೆ ಮೇಲ್ದರ್ಜೆಗೇರಿಸಲಾಗುವುದು. ಬಂಟ್ವಾಳದ ಆಸ್ಪತ್ರೆಯನ್ನು ೧೦೦ ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವುದಾಗಿ ಹಿಂದೆ ಯಾವ ಭರವಸೆಯನ್ನೂ ಕೊಟ್ಟಿಲ್ಲ. ಈ ಆಸ್ಪತ್ರೆಗೆ ಕ್ಷ-ಕಿರಣ ಯಂತ್ರವನ್ನು ಇನ್ನು ಮಂಜೂರಾಗಿದೆಯೇ ಇರುವುದರಿಂದ ಆಸ್ಪತ್ರೆಯಲ್ಲಿ ಸ್ಥಳಾವಕಾಶವಿಲ್ಲವೆಂಬ ಕಾರಣಕ್ಕಾಗಿ ಅದನ್ನು ಹಿಂದಿರುಗಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಈ ಆಸ್ಪತ್ರೆಯ ಕಟ್ಟಡವು ಕೆಲವು ಕಡೆ ಸೋರುತ್ತಿರುವುದು ಕಂಡು ಬಂದಿದ್ದು ಅದನ್ನು ಕೂಡಲೇ ದುರಸ್ತಿ ಮಾಡಲು ಕ್ರಮ ಕೈಗೊಳ್ಳುವಂತೆ ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿಗೆ ತಿಳಿಸಲಾಗುವುದು. ಇದು ತಾಲ್ಲೂಕು ಮಟ್ಟದ ಆಸ್ಪತ್ರೆಯಾದುದರಿಂದ ಜಿಲ್ಲಾ ಪರಿಷತ್ತಿನ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ಕೊಡಗು ಪಟ್ಟಣವನ್ನು 'ಡಿ' ವರ್ಗವಾಗಿ ವರ್ಗೀಕರಿಸುವುದು

ಶ್ರೀಮತಿ ಸುಮಾ ವಸಂತ್ (ವೀರಾಜಪೇಟೆ).—ಮಾನ್ಯ ಅಧ್ಯಕ್ಷರೇ, ಕೊಡಗು ಜಿಲ್ಲೆಯ ಮಡಿಕೇರಿ ಪುರಸಭೆಯ ವ್ಯಾಪ್ತಿಯಲ್ಲಿನ ಜನಸಂಖ್ಯೆ ೧೯೮೧ರ ಜನಗಣತಿಯ ಪ್ರಕಾರ ೨೪,೭೪೨ ಇದ್ದು '೫೫,೦೦೦ ಜನಸಂಖ್ಯೆಗಿಂತ ಕಡಿಮೆ ಇರುವುದರಿಂದ ಈ ಪುರಸಭೆಯನ್ನು ''ಇ'' ಗಂಂಪಾಗಿ ವರ್ಗೀಕರಿಸಲಾಗಿದೆ. ಆದರೆ ಈಗ ಪುರಸಭೆಯ ವ್ಯಾಪ್ತಿಯಲ್ಲಿನ ಜನಸಂಖ್ಯೆ ಸುಮಾರು ೨೮,೦೦೦ ಕ್ಕಿಂತಲೂ ಮೇಲ್ಪಟ್ಟಿರುವುದರಿಂದ ಪುರಸಭೆಯಿಂದ ಈ ಬಗ್ಗೆ ದೃಢೀಕರಣ ಪತ್ರವನ್ನು ಪಡೆದು ಕರ್ನಾಟಕ ಸರಕಾರದ ಕಂದಾಯ ಇಲಾಖಾ ನೌಕರರ ಸಂಘ, ಕೊಡಗಿನ ಜಿಲ್ಲಾಧಿಕಾರಿಯವರ ಮಂಖಾಂತರ ದಿನಾಂಕ ೬-೪-೮೭ ರಂದು, ಜಿಲ್ಲಾಧಿಕಾರಿಯವರ ಪತ್ರಸಂಖ್ಯೆ ಎ/೫/ಇತರೆ/೩/೮೭-೮೮ ದಿನಾಂಕ ೯-೪-೮೭ರಂದು ಜಿಲ್ಲಾಧಿಕಾರಿಯವರ ಪತ್ರದೊಡನೆ ರಾಜ್ಯ ಸರಕಾರದ ಮಂಖ್ಯ ಕಾರ್ಯದರ್ಶಿಯಂವರಿಗೆ ಶಿಫಾರಸ್ಸು ಮಾಡಿ ಮಂಡಿಕೇರಿ ಪುರಸಭೆಯನ್ನು ''ಡಿ'' ವರ್ಗವೆಂದು ವರ್ಗೀಕರಿಸುವ ಬಗ್ಗೆ ಪತ್ರವನ್ನು ಕಳುಹಿಸಿರುತ್ತಾರೆ. ಈ ಬಗ್ಗೆ ಸರಕಾರದವರು ಕೂಡಲೇ ಕ್ರಮ ಕೈಗೊಂಡು ''ಈ ನಗರವನ್ನು ''ಡಿ''ವರ್ಗವಾಗಿ ವರ್ಗೀಕರಿಸಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ (ವಿಾನುಗಾರಿಕೆ, ಒಳನಾಡು ಜಲಸಾರಿಗೆ ಮತ್ತು ಬಂದರು ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂಖ್ಯಮಂತ್ರಿಗಳ ಪರವಾಗಿ ಈ ಉತ್ತರವನ್ನು ಕೊಡಲು

ಬಯಸುತ್ತೇನೆ. ಕರ್ನಾಟಕ ರಾಜ್ಯದ ಮೂರನೇ ವೇತನ ಆಯೋಗವು ಮನೆಬಾಡಿಗೆ ಭತ್ಯ ಮತ್ತು ನಗರ ಪರಿಹಾರ ಭತ್ಯಗಳ ಉದ್ದೇಶಗಳಿಗಾಗಿ ನಗರಗಳು ಮತ್ತು ಇತರ ಸ್ಥಳಗಳನ್ನು ಜನಸಂಖ್ಯೆಯನ್ನು ಆಧರಿಸಿ ಐದು ವರ್ಗಗಳಾಗಿ ಪುನರ್ ವರ್ಗೀಕರಿಸಲು ಶಿಫಾರಸ್ಸು ಮಾಡಿತ್ತು. ಆಯೋಗದ ಶಿಫಾರಸ್ಸನ್ನು ಸರಕಾರವು ಅಂಗೀಕರಿಸಿ, ಮನೆ ಬಾಡಿಗೆ ಭತ್ಯ ಮತ್ತು ನಗರ ಪರಿಹಾರ ಭತ್ಯಗಳ ಉದ್ದೇಶಗಳಿಗಾಗಿ ರಾಜ್ಯದಲ್ಲಿನ ನಗರಗಳು ಮತ್ತು ಇತರ ಸ್ಥಳಗಳನ್ನು ೧೯೮೧ರ ಜನಗಣತಿಯ ಆಧಾರದ ಮೇಲೆ ಅವುಗಳ ಸಂಖ್ಯೆಯ ಅನುಸಾರವಾಗಿ ಈ ಮುಂದೆ ತೋರಿಸಿದಂತೆ ಐದು ವರ್ಗಗಳಾಗಿ ವರ್ಗೀಕರಿಸಿದೆ.

	ನಗರದ ಇತರ ಸ್ಥಳಗಳ ಜನಸಂಖ್ಯೆ	ವರ್ಗೀಕರಣ
೧	೧೫ ಲಕ್ಷ ಮತ್ತು ಅದಕ್ಕೂ ಹೆಚ್ಚು	'ಎ'
೨	೫ ಲಕ್ಷ ಮತ್ತು ಅದಕ್ಕೂ ಹೆಚ್ಚು ಆದರೆ ೧೫ ಲಕ್ಷಕ್ಕಿಂತ ಕಡಿಮೆ.	'ಬಿ'
೩	೧ ಲಕ್ಷ ಮತ್ತು ಅದಕ್ಕೂ ಹೆಚ್ಚು ಆದರೆ ಐದು ಲಕ್ಷಕ್ಕಿಂತ ಕಡಿಮೆ	'ಸಿ'
೪	೨೫,೦೦೦ ಮತ್ತು ಅದಕ್ಕೂ ಹೆಚ್ಚು, ಆದರೆ ೧ ಲಕ್ಷಕ್ಕಿಂತ ಕಡಿಮೆ	'ಡಿ'
೫	೨೫,೦೦೦ ಕ್ಕಿಂತ ಕಡಿಮೆ ಇರುವ ಇತರ ಸ್ಥಳಗಳು	'ಇ'

೧೯೮೧ರ ಜನಗಣತಿಯ ನಂತರ ಯಾವುದೇ ಅಧಿಕೃತವಾದ ಮಧ್ಯಾಂತರಿಕ ಜನಗಣತಿ ನಮ್ಮ ರಾಜ್ಯದಲ್ಲಿ ನಡೆದಿಲ್ಲ. ನಗರಸಭೆ ಮತ್ತು ನಗರಪಾಲಿಕೆಗಳು ಕೊಟ್ಟ ಪ್ರಮಾಣ ಪತ್ರಗಳನ್ನು ಆಧರಿಸಿ ಈ ವರ್ಗೀಕರಣದಲ್ಲಿ ಬದಲಾವಣೆಯನ್ನು ಮಾಡುವುದು ಸೂಕ್ತವಲ್ಲ. ೧೯೮೧ರ ಜನಗಣತಿಯ ಪ್ರಕಾರ, ಮಡಿಕೇರಿಯ ಜನಸಂಖ್ಯೆ ೨೫,೦೦೦ ಕ್ಕಿಂತ ಕಡಿಮೆ ಇರುವುದರಿಂದ ಇದು 'ಇ' ವರ್ಗದಲ್ಲಿ ಸೇರಿದೆ. ಕೇಂದ್ರ ಸರ್ಕಾರದ ಸೆನ್ಸಸ್ ಕಮಿಷನರ್‌ರವರು ಪುನಃ ಜನಗಣತಿಯನ್ನು ಮಾಡುವವರೆಗೆ ಈ ವರ್ಗೀಕರಣದಲ್ಲಿ ಯಾವುದೇ ಬದಲಾವಣೆಯನ್ನು ಮಾಡಲು ಸಾಧ್ಯವಿಲ್ಲ.

ಬ್ರಹ್ಮಾವರ ಕ್ಷೇತ್ರದಲ್ಲಿ ರಸ್ತೆಗಳ ರಿಪೇರಿ

ಶ್ರೀ ಜಿ.ಎಸ್. ಬಸವರಾಜ್(ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೇ, ನನ್ನ ಮತದಾರ ಕ್ಷೇತ್ರವಾದ ಬ್ರಹ್ಮಾವರದ ವ್ಯಾಪ್ತಿಗೊಳಪಟ್ಟ ಹೆಚ್ಚಿನ ರಸ್ತೆಗಳು ನಾದುರಸ್ತಿಯಲ್ಲಿವೆ. ಜಿಲ್ಲಾ ರಸ್ತೆಗಳಾದ ಕಲ್ಯಾಣಪುರ,—ಪೆರ್ಡೂರು–ದೊಡ್ಡದಂಗಡಿ–ಯಂಗಟಿ ರಸ್ತೆ, ಕೊಕ್ಕರ್ಣೆ–ಸಂತೆಕಟ್ಟೆ ರಸ್ತೆಗಳೂ ಕೂಡಾ ಈವರೆಗೆ ಸಂಪೂರ್ಣ ತಾರು ಆಗಿರುವುದಿಲ್ಲ. ಈ ವಿಷಯವನ್ನು ನಾನು ಕಳೆದ ಎರಡು ಬಾರಿ ಬಜೆಟ್ ಅಧಿವೇಶನಗಳಲ್ಲಿ ಸನ್ಮಾನ್ಯ ಸಚಿವರ ಗಮನಕ್ಕೆ ತಂದಾಗ ಎರಡು ಬಾರಿಯೂ ಈ ರಸ್ತೆಗಳನ್ನು ವಿಶೇಷ ಆದ್ಯತೆಯ ಮೇಲೆ ಈ ವರ್ಷವೇ ತಾರು ಹಾಕಿಸಿ ಕೊಡುವುದಾಗಿ ಭರವಸೆಯನ್ನು ನೀಡಿದರೂ, ಆ ರಸ್ತೆಗೆ ತಾರು ಹಾಕಿಸಲಾಗಲಿಲ್ಲ. ಈ ವರ್ಷದ ಬಜೆಟ್‌ನಲ್ಲೂ ಕೂಡಾ ಆ ರಸ್ತೆಗಳಿಗೆ ಹೆಚ್ಚಿನ ಹಣ ನೀಡದೇ ಇರುವುದರಿಂದ ಆ ರಸ್ತೆಗಳು ತಾರನ್ನು ಕಾಣುವ ಆಸೆ ನನಗಿಲ್ಲ. ಆದುದರಿಂದ ಈ ವರ್ಷವೇ ಆ ರಸ್ತೆಗಳ ಉಳಿದ ಭಾಗಗಳಿಗೆ ತಾರನ್ನು ಹಾಕಿಸಿ ಧೂಳವನ್ನು ತಿನ್ನುತ್ತಿರುವ ಜನರ ಮನಸ್ಸಿಗೆ ನೆಮ್ಮದಿಯನ್ನು ತರಬೇಕೆಂದು ಮಾನ್ಯ ಸಚಿವರನ್ನು ನಿಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ (ವಿಮಾನಂಗಾರಿಕೆ, ಒಳನಾಡಂ ಜಲಸಾರಿಗೆ ಮಂತ್ರಿ ಬಂದರು ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಪಿ.ಡಬ್ಲ್ಯು.ಡಿ. ಮಂತ್ರಿಗಳು ದೆಹಲಿಗೆ ಕಾರ್ಯನಿಮಿತ್ತ ಹೋಗಿರುವುದರಿಂದ, ಅವರು ಬಂದ ತಕ್ಷಣ ಇದನ್ನು ಅವರ ಗಮನಕ್ಕೆ ತರುತ್ತೇನೆ.